# ರೋಹಿಣಿ ನಿಲೇಕಣಿ



## ಸಾಧಕಿಯರು

'ಇನ್ಫೋಸಿಸ್‌ನ ರೂವಾರಿ ನಂದನ್ ನಿಲೇಕಣಿಯವರ ಸಂಗಾತಿ ಇವರು' ಎಂದು ಹೇಳಿದರೆ ಇವರು ಬೇಸರಿಸಿಕೊಳ್ಳುತ್ತಾರೆ. ಗಂಡಂದಿರ ಸಾಧನೆ, ಹೆಸರುಗಳೊಂದಿಗೇ ಪತ್ನಿಯನ್ನು ಗುರುತಿಸುವುದೇಕೆ? ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದಾರೆ, 46 ವರ್ಷ ವಯಸ್ಸಿನ ಸಮಾಜ ಸೇವಕಿ ರೋಹಿಣಿ ನಿಲೇಕಣಿ.

ಕುಡಿಯುವ ನೀರಿನ 100 ಕೋಟಿ ರೂ. ಯೋಜನೆಯೊಂದಿಗೆ ಪ್ರಸಿದ್ಧ ಅಕ್ಷರ ಫೌಂಡೇಷನ್ ಮೂಲಕ ಹತ್ತಾರು ಸಾಮಾಜಿಕ-ಶೈಕ್ಷಣಿಕ ಚಟುವಟಿಕೆಯಲ್ಲಿ ಇವರು ತೊಡಗಿಸಿಕೊಂಡಿದ್ದಾರೆ. ಪ್ರಥಮ್ ಜಾಲದ ಮೂಲಕ ಲಕ್ಷಾಂತರ ಮಕ್ಕಳನ್ನು ತಲುಪಿದ್ದಾರೆ. ಈ ಒಂದೆ ಪತ್ರಿಕೋದ್ಯಮದಲ್ಲಿದ್ದ ಇವರ ಆಸಕ್ತಿ, ಕಾವ್ಯ, ಯೋಗ ಹಾಗೂ ಸಂಗೀತಗಳತ್ತ ಹರಿದಿದೆ. ಜಾಹ್ನವಿ ಮತ್ತು ನಿಹಾರ್ ಎಂಬ ಎರಡು ಮುದ್ದು ಮಕ್ಕಳೊಂದಿಗೆ ಕುಟುಂಬ ನಿರ್ವಹಿಸುತ್ತಿರುವ ಇವರು ಕ್ರಿಯಾಶೀಲರು.

ಒಂದು ಕಾಲದಲ್ಲಿ 'ಶ್ರೀಮತಿ ನಂದನ್' ಎಂದು ಗುರುತಿಸುತ್ತಿದ್ದ ಜನ ಈಗ 'ರೋಹಿಣಿ' ಎಂದು ಗುರುತಿಸುವಂತೆ ಮಾಡಿಕೊಂಡಿದ್ದಾರೆ! 'ಸದಾ ಕ್ರಿಯಾಶೀಲರಾಗಿ ಹಾಸ್ಯ ಪ್ರಜ್ಞೆ ಇರಲಿ' ಎಂಬುದು ಇವರ ಯಶಸ್ಸಿನ ಸೂತ್ರ

www.rohininilekani.org